**KARNATAKA**
**News**

**KANNADA**

**UDAYAVANI**
**Mumbai**

**JULY 2018**


# ಉದಯವಾಣಿ

ಜನಮನದ ಜೀವನಾಡಿ

ಮುಂಬಯಿ । ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ

ANI – KANNADA DAILY – MUMBAI ಮುಂಬಯಿ, ಶುಕ್ರವಾರ, ಜುಲೈ 27, 2018 ಬೆಲೆ: ₹ 5-00


## ವಾತ್ವಾನಿ, ವಾಂಗ್‌ಚುಕ್‌ಗೆ 'ಮ್ಯಾಗ್ಸೆಸೆ' ಪ್ರಶಸ್ತಿ ಗರಿ

ಮನಿಲಾ: ಏಷ್ಯಾ ಮಟ್ಟದ ನೋಬೆಲ್ ಬಹುಮಾನ ಎಂದೇ ಖ್ಯಾತಿ ಗಳಿಸಿರುವ ರೇಮನ್ ಮ್ಯಾಗ್ಸೆಸೆ ಪ್ರಶಸ್ತಿಗೆ ಮುಂಬೈನ ಮನೋವೈದ್ಯ



ವಾತ್ವಾನಿ



ವಾಂಗ್‌ಚುಕ್

ಭರತ್ ವಾತ್ವಾನಿ ಹಾಗೂ ಈಶಾನ್ಯ ರಾಜ್ಯಗಳ ಪ್ರಾಂತ್ಯದ ಶಿಕ್ಷಣ ತಜ್ಞ ಸೋನಂ ವಾಂಗ್‌ಚುಕ್‌ಗೆ ಸಂದಿದೆ. 1988ರಲ್ಲಿ ಅವರು ಸ್ಥಾಪಿಸಿರುವ ಶ್ರದ್ಧಾ ರಿಹಬಲಿಟೇಷನ್ ಫೌಂಡೇಷನ್ ಮೂಲಕ ಡಾ. ಭರತ್ ವಾಗ್ವಾಣಿ, ಮನೋರೋಗಕ್ಕೆ ತುತ್ತಾಗಿರುವ ನಿರ್ಗತಿಕರನ್ನು ಗುಣಪಡಿಸುವ ಕಾಯಕದಲ್ಲಿತಮ್ಮನ್ನುತೊಡಗಿಸಿಕೊಂಡಿದ್ದಾರೆ. ಇನ್ನು, ಲಡಾಖ್‌ನಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ವಿದ್ಯಾರ್ಥಿಗಳ ಅಭಿವೃದ್ಧಿಗಾಗಿ ಸ್ಟೂಡೆಂಟ್ಸ್ ಎಜುಕೇಷನ್ ಆ್ಯಂಡ್ ಕಲ್ಚರಲ್ ಮೂವ್‌ಮೆಂಟ್ ಆಫ್ ಲಡಾಕ್ (ಸೆಕ್‌ಮೊಲ್) ಸಂಸ್ಥೆಯನ್ನು ಸ್ಥಾಪಿಸಿದ್ದಾರೆ.

ಇವರಲ್ಲದೆ, ಈ ಬಾರಿಯ ರೇಮನ್ ಮ್ಯಾಗ್ಸೆಸೆ ಪ್ರಶಸ್ತಿಯು ಯೋಕ್ ಚಾಂಗ್ (ಕಾಂಬೋಡಿಯಾ), ಮರಿಯಾ ಡಿ ಲಾರ್ಡೆಸ್ ಮಾರ್ಟಿನ್ಸ್ ಕ್ರುಜ್ (ಈಸ್ಟ್ ತೈಮೊರ್), ಹೊವಾರ್ಡ್ ಡೀ (ಫಿಲಿಪ್ಪೀನ್ಸ್) ಹಾಗೂ ವೊ ಥಿ ಹೊವಾಂಗ್ ಯೆನ್ (ವಿಯೆಟ್ನಾಂ) ಅವರಿಗೂ ಸಂದಿದೆ.

**KARNATAKA**
**News**

**KANNADA**

**KARNATAKA MALLA**
**Mumbai**

**JULY 2018**

epaper - karnatakamalla.com

# ಕರ್ನಾಟಕ ಮಲ್ಲ

TEL: 24715208, Fax:24715237 ಮುಂಬಯಿಯಿಂದ ಪ್ರಕಟಿತ ಏಕೈಕ ಸಮಗ್ರ ಕನ್ನಡ ದೈನಿಕ KARNATAKA MALLA, MUMBAI

ಸಂಪುಟ : 27 ಸಂಚಿಕೆ : 175 ಶುಕ್ರವಾರ 27-07-2018 ಬೆಲೆ: ₹ 5-00 ಪುಟಗಳು - 12 ಸಂಪಾದಕ: ಚಂದ್ರಶೇಖರ ಪಾಲೆತ್ತಾಡಿ

## ಇಬ್ಬರು ಭಾರತೀಯರಿಗೆ ಪ್ರತಿಷ್ಠಿತ ಮ್ಯಾಗ್ಸೆಸೆ ಪ್ರಶಸ್ತಿ

ಹೊಸದಿಲ್ಲಿ, ಜು. 26 -ಈ ವರ್ಷ ಏಷ್ಯಾದ ಅತ್ಯುನ್ನತ ಪ್ರಶಸ್ತಿಗಳಲ್ಲಿ ಒಂದಾದ ರಾಮನ್ ಮ್ಯಾಗ್ಸೆಸೆ ಗೌರವಕ್ಕೆ ಇಬ್ಬರು ಭಾರತೀಯರು ಭಾಜನರಾಗಿದ್ದಾರೆ. ಭಾರತದ ಭರತ್ ವಟ್ವಾನಿ ಮತ್ತು ಸೋನಮ್ ವಾಂಗ್ ಚುಕ್ ಅವರ ಸಾಧನೆ ಮತ್ತು ಸೇವೆಯನ್ನು ಗುರುತಿಸಿ 2018ನೇ ಸಾಲಿನ ಮ್ಯಾಗ್ಸೆಸೆ ಪ್ರಶಸ್ತಿ ನೀಡಲಾಗಿದೆ. ಲಡಾಕ್ ಮೂಲದ ಇಂಜಿನಿಯರ್ ಆಗಿರುವ 51 ವರ್ಷದ ಸೋನಮ್ ವಾಂಗ್ ಚುಕ್ ಅವರು, ಪಶ್ಚಿಮ ಹಿಮಾಲಯದ ಮರುಭೂಮಿಯಲ್ಲಿ ಕೃಷಿಗೆ ನೀರಿನ ಕೊರತೆಯನ್ನು ನೀಗಿಸಲು ಐಸ್ ಸ್ತೂಪ ನಿರ್ಮಿಸುವ ಮೂಲಕ ಎಲ್ಲರ ಗಮನ ಸೆಳೆದಿದ್ದರು. ಇನ್ನು ಭರತ್ ವಟ್ವಾನಿ ಅವರಿಗೆ ಅವರ ಅಸಾಧರಣ ಧೈರ್ಯ ಮತ್ತು ಬಹಿಷ್ಕರಿಸಿದ ಮಾನಸಿಕ ರೋಗಿಗಳಿಗೆ ಚಿಕಿತ್ಸೆ ನೀಡುವ ಮೂಲಕ ಅವರ ಘನತೆಯನ್ನು ಪುನಃಸ್ಥಾಪಿಸುವ ಕಾರ್ಯವನ್ನು ಗುರುತಿಸಿ ಮ್ಯಾಗ್ಸೆಸೆ ಪ್ರಶಸ್ತಿ ನೀಡಲಾಗಿದೆ. 1957ರಲ್ಲಿ ರಾಮನ್ ಮ್ಯಾಗ್ಸೆಸೆ ಪ್ರಶಸ್ತಿಯನ್ನು ಫಿಲಿಪ್ಪೀನ್ಸ್ ನ ಮೂರನೇ ಅಧ್ಯಕ್ಷರ ಹೆಸರಲ್ಲಿ ಸ್ಥಾಪಿಸಲಾಗಿದ್ದು, ಇದು ಏಷ್ಯಾದ ಪ್ರತಿಷ್ಠಿತ ಪ್ರಶಸ್ತಿ ಎಂದು ಕರೆಯಲ್ಪಡುತ್ತದೆ. ಏಷ್ಯಾವಲಯದಲ್ಲಿನ ಸಾಧಕರಿಗೆ ಮ್ಯಾಗ್ಸೆಸೆ ಪ್ರತಿಷ್ಠಾನ ಈ ಪ್ರಶಸ್ತಿ ನೀಡುತ್ತದೆ.

ಗೀತಾಮೃತ

ಇಂದು ಗೀತಾ ಜಯಂತಿ. ಅರ್ಜುನನಿಗೆ ಕೃಷ್ಣ ಬೋಧಿಸಿದ ಭಗವದ್ಗೀತೆಯ ಬೆಳಕಿನಲ್ಲಿ ಇಂದು ಜಂಜಡಗಳಿಲ್ಲದ ಸಾರ್ಥಕ ಬದುಕು ನಡೆಸುವುದು ಹೇಗೆ ಎಂಬ ಗೀತಾ ಸಾರವನ್ನು ಬಹುಶ್ರುತ ವಿದ್ವಾಂಸ ಕೃಷ್ಣರಾಜ ಕುತ್ಪಾಡಿ ಅವರು ಕಟ್ಟಿಕೊಟ್ಟಿದ್ದಾರೆ. ಗೀತಾ ಜಯಂತಿಗೆ ವಿಜಯವಾಣಿ ವಿಶೇಷ ಎಲ್ಲ ಪುಟಪುಟಗಳಲ್ಲಿ...

ಇಂದು ಗೀತಾ ಜಯಂತಿ

# ವಿಜಯವಾಣಿ

ಕನ್ನಡಿಗರ ಧ್ವನಿ

ನಂ.1 ಕನ್ನಡ ದಿನಪತ್ರಿಕೆ

14 ಡಿಸೆಂಬರ್ 2021 | ಮಂಗಳವಾರ
14 DECEMBER 2021
ಪುಟ 12
C

ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ VIJAYAVANI • KALABURAGI • ಕಲಬುರಗಿ ಸಹಾಯವಾಣಿ: 8884411685 • ಸಂಪುಟ 10 • ಸಂಚಿಕೆ 164 ₹5


**KARNATAKA**
**News**

**KANNADA**

**VIJAYAVANI**
**Kalaburagi**

**DECEMBER 2021**

# ಕಾಣೆಯಾದಾಕೆ ಮಗು ಜತೆ ಬಂದ್ಳು

## ತಾಯಿ, ಮಗುವನ್ನು ಶಹಾಬಾದ್‌ಗೆ ತಲುಪಿಸಿದ ಮುಂಬೈನ ಶ್ರದ್ಧಾ ಫೌಂಡೇಷನ್

■ ವಿಜಯವಾಣಿ ಸುದ್ದಿಜಾಲ ಶಹಾಬಾದ್

ಹದಿನೈದು ವರ್ಷ ಹಿಂದೆ ನಗರದಿಂದ ಕಾಣೆಯಾಗಿದ್ದ ಬಾಲಕಿಯೊಬ್ಬಳು ಈಗ 9 ವರ್ಷದ ಮಗುವಿನೊಂದಿಗೆ ಮುಂಬೈನಲ್ಲಿ ಪತ್ತೆ ಆಗಿದ್ದಾಳೆ. ಈಕೆಯನ್ನು ಸೋಮವಾರ ಪಾಲಕರಿಗೆ ಒಪ್ಪಿಸಲಾಗಿದೆ.

ನಗರದ ಹಳೆಯ ಶಹಾಬಾದ್‌ನ ಶಿಬಿರಕಟ್ಟಾ ಬಡಾವಣೆಯಲ್ಲಿ ವಾಸವಾಗಿದ್ದ, ಸಂಗೀತಾ ದಾನಪ್ಪ ಎಂಬಾಕೆ 8ನೇ ತರಗತಿಯಲ್ಲಿ ಓದುವಾಗ ಕಾಣೆಯಾಗಿದ್ದಳು. ಮಾನಸಿಕ ಅಸ್ವಸ್ಥೆಯಾಗಿದ್ದ ಈಕೆಗೆ ಪೋಷಕರು ಸಾಕಷ್ಟು ಹುಡುಕಿದರೂ ಸಿಕ್ಕಿರಲಿಲ್ಲ. ಇದೀಗ ಮುಂಬೈನ ಶ್ರದ್ಧಾ ರೇಗುಲೇಷನ್ ಫೌಂಡೇಷನ್ ಸಹಾಯದಿಂದ ವಾಪಸ್ಸಾಗಿದ್ದಾಳೆ.

ಸಂಗೀತಾ ಶಹಾಬಾದ್‌ನಿಂದ ತಿರುಪತಿಗೆ ಹೋಗಿ ವಾಸವಾಗಿದ್ದಳು. ಅಲ್ಲಿ ಲಾರಿ ಚಾಲಕನೊಬ್ಬನನ್ನು ಮದುವೆಯಾಗಿದ್ದು, ಗಂಡು ಮಗುವಿಗೆ ಜನ್ಮ ನೀಡಿದ್ದಾಳೆ. 2-3 ವರ್ಷ ದಾಂಪತ್ಯ ಜೀವನ ನಡೆಸಿದ್ದು, ಬಳಿಕ ಗಂಡ ಬಿಟ್ಟು ಹೋಗಿದ್ದಾನೆ. ಆಗ ತಿರುಪತಿಯಿಂದ ಮುಂಬೈಗೆ ಹೋಗಿದ್ದಾಳೆ. ರಸ್ತೆ ಬದಿಯಲ್ಲಿ ಮಗುವಿನೊಂದಿಗೆ ಬದುಕಿನ ಬಂಡಿ ಸಾಗಿಸುತ್ತಿದ್ದಳು. ಈಕೆಯನ್ನು ಶ್ರದ್ಧಾ ರೇಗುಲೇಷನ್ ಫೌಂಡೇಷನ್‌ನ ನಿರ್ದೇಶಕ ಹಾಗೂ ಮಾನಸಿಕ ತಜ್ಞ ಡಾ. ಭರತ ವಾಟವನಿ ಗಮನಿಸಿದ್ದು, ತಮ್ಮ ಕ್ಲಿನಿಕ್‌ಗೆ ಕರೆತಂದು ಚಿಕಿತ್ಸೆ ನೀಡಿದ್ದಾರೆ. ಮಹಿಳೆಯನ್ನು ವಿಚಾರಿಸಿ, ತಮ್ಮ ಫೌಂಡೇಷನ್‌ನ ಸಿಬ್ಬಂದಿಯೊಂದಿಗೆ ತಿರುಪತಿಗೆ ಕಳಿಸಿಕೊಟ್ಟಿದ್ದಾರೆ. ಆದರೆ ಅಲ್ಲಿ ಗಂಡನ ಬಗ್ಗೆ ಸುಳಿವು ಸಿಕ್ಕಿಲ್ಲ. ಕೆಲವರು ಸಂಗೀತಾ ಕರ್ನಾಟಕದ ಶಹಾಬಾದ್‌ನಿಂದ ಬಂದಿದ್ದಾಳೆ ಎಂದು ಹೇಳಿದ್ದಾರೆ. ಹೀಗಾಗಿ ಸೋಮವಾರ ಶಹಾಬಾದ್ ಠಾಣೆಗೆ ಕರೆದುಕೊಂಡು ಬಂದಿದ್ದಾರೆ.

ನಗರದಲ್ಲಿ ವಿಚಾರಣೆ ನಡೆಸಿದ್ದು, ಇಲ್ಲಿನ ದಾನಪ್ಪ ಎಂಬುವವರ ಮೊದಲ ಪತ್ನಿ ಮಗಳು ಎಂದು ತಿಳಿದುಬಂದಿದೆ. ಬಳಿಕ ಸಹೋದರ ರವಿಕುಮಾರ ಅವರ ಸುಪರ್ದಿಗೆ ಒಪ್ಪಿಸಲಾಗಿದೆ. ಪೊಲೀಸರಾದ ಹುಸೇನ್ ಪಾಶಾ, ಶಿವರಾಜ, ಹೇಮಲತಾ, ಶರಣಯ್ಯ ಸ್ವಾಮಿ ಇದ್ದರು.



15 ವರ್ಷಗಳ ಹಿಂದೆ ಕಾಣೆಯಾಗಿದ್ದ ಯುವತಿ ಸಂಗೀತಾಳನ್ನು ಮುಂಬೈನ ಶ್ರದ್ಧಾ ರೇಗುಲೇಷನ್ ಫೌಂಡೇಷನ್ ಸದಸ್ಯರು ಶಹಾಬಾದ್ ಪೊಲೀಸ್ ಠಾಣೆಗೆ ಒಪ್ಪಿಸಿರುವುದು.

> ಮಾನಸಿಕ ಅಸ್ವಸ್ಥೆ ಸಂಗೀತಾಗೆ ಶ್ರದ್ಧಾ ರೇಗುಲೇಷನ್ ಫೌಂಡೇಷನ್‌ನಿಂದ ಮುಂದಿನ 2 ವರ್ಷ ಉಚಿತ ಚಿಕಿತ್ಸೆ ನೀಡಲಾಗುವುದು. ಆಕೆಯ ಆರೋಗ್ಯವನ್ನು ಸಂಪೂರ್ಣ ಸರಿಪಡಿಸುವ ನಿಟ್ಟಿನಲ್ಲಿ ಶ್ರಮಿಸಲಾಗುವುದು.
>
> | ಡಾ. ಭರತ ವಾಟವನಿ
> ನಿರ್ದೇಶಕ, ಶ್ರದ್ಧಾ ರೇಗುಲೇಷನ್ ಫೌಂಡೇಷನ್, ಮುಂಬೈ

**KARNATAKA**
**News**

**KANNADA**

**UDAYAVANI**
**Kalaburagi**

**DECEMBER 2021**




ದ. ಆಫ್ರಿಕಾ ಟೆಸ್ಟ್‌ಗೆ ರೋಹಿತ್ ಅಲಭ್ಯ » 10

# ಉದಯವಾಣಿ

ಜನಮನದ ಜೀವನಾಡಿ

ಶುಭನುಡಿ

ಸುಖವಾಗಿದ್ದಾಗ ಎಲ್ಲರೂ ಬಂಧುಗಳೇ. ಕಷ್ಟಕಾಲದಲ್ಲಷ್ಟೇ ನಿಜವಾದ ಹಿತೈಷಿಗಳು ಯಾರು ಎನ್ನುವುದು ನಮಗೆ ಅರ್ಥವಾಗುತ್ತದೆ.

www.udayavani.com Kalaburagi ಕಲಬುರಗಿ | ಮಂಗಳವಾರ, ಡಿಸೆಂಬರ್ 14, 2021 | ಪುಟ 10 | ₹ 5.00 ಮಣಿಪಾಲ | ಬೆಂಗಳೂರು | ಹುಬ್ಬಳ್ಳಿ | ಕಲಬುರಗಿ | ದಾವಣಗೆರೆ | ಮುಂಬೈ


## 14 ವರ್ಷ ಬಳಿಕ ಪೋಷಕರ ಮಡಿಲು ಸೇರಿದ ಮಹಿಳೆ

ಶಹಾಬಾದ: ನಗರದ ಹಳೆ ಶಹಾಬಾದನಲ್ಲಿ 14 ವರ್ಷದ ಹಿಂದೆ ನಾಪತ್ತೆಯಾದ ಮಹಿಳೆಯೊಬ್ಬಳು ಪತ್ತೆಯಾಗಿ ಪೊಲೀಸರು, ವೀರಶೈವ ಸಮಾಜದ ಅಧ್ಯಕ್ಷ ಸೂರ್ಯಕಾಂತ ಕೋಬಾಳ ಹಾಗೂ ಮುಂಬಯಿನ ಶ್ರದ್ಧಾ ರೇಗುಲೇಷನ್ ಫೌಂಡೇಶನ್ ಸಿಬ್ಬಂದಿ ಸಮ್ಮುಖದಲ್ಲಿ ಮರಳಿ ಮನೆಗೆ ಸೇರಿದ ಘಟನೆ ಸೋಮವಾರ ನಡೆದಿದೆ.

ಸುಮಾರು 14 ವರ್ಷದ ಹಿಂದೆ ನಗರದ ಹಳೆ ಶಹಾಬಾದ ಸಂಗೀತಾ ದಾನಪ್ಪ ದಾನಪ್ಪಗೋಳ ನಾಪತ್ತೆಯಾಗಿದ್ದಳು. ಅಂದು ಪೊಲೀಸ್ ಠಾಣೆಗೆ ದೂರು ಸಲ್ಲಿಸಲಾಗಿತ್ತು. ಎಲ್ಲಾ ಕಡೆ ಹುಡುಕಲಾಗಿತ್ತು. ಆದರೂ ಪತ್ತೆಯಾಗಿರಲಿಲ್ಲ. ಮಾನಸಿಕ ಅಸ್ವಸ್ಥೆಯಾದ ಇವಳನ್ನು ಕಳೆದ 8 ತಿಂಗಳ ಹಿಂದೆ ಮುಂಬಯಿಯಲ್ಲಿ



ಶಹಾಬಾದ: ನಗರದಿಂದ ಹದಿನಾಲ್ಕು ವರ್ಷದ ಹಿಂದೆ ನಾಪತ್ತೆಯಾಗಿದ್ದ ಮಹಿಳೆಯನ್ನು ಪೊಲೀಸರು ಕುಟುಂಬಸ್ಥರಿಗೆ ಒಪ್ಪಿಸಿದರು.

ಅಲೆದಾಡುತ್ತಿರುವುದನ್ನು ಗಮನಿಸಿ, ಪೊಲೀಸರು ಶ್ರದ್ಧಾ ರೇಗುಲೇಷನ್ ಫೌಂಡೇಶನ್‌ಗೆ ಒಪ್ಪಿಸಿದ್ದರು. ಶ್ರದ್ಧಾ ರೇಗುಲೇಷನ್ ಫೌಂಡೇಶನ್ ಮುಖ್ಯಸ್ಥರಾದ ಡಾ| ಭರತ್ ವಟವಾಣಿ ಅವರು ಮಾನಸಿಕ ರೋಗಿ ತಜ್ಞರಾಗಿದ್ದು ಅವಳನ್ನು ಚಿಕಿತ್ಸೆಗೆ ಒಳಪಡಿಸಿದ್ದಾರೆ.

ಸುಮಾರು ಏಳೆಂಟು ತಿಂಗಳಿನಿಂದ ಉಪಚರಿಸಿ ಎಲ್ಲಿಂದ ಬಂದಿರುವೆ ಎಂದು ಕೇಳಿದ್ದಾರೆ. ಅವಳು ಹದಿನಾಲ್ಕು ವರ್ಷದ ಹಿಂದೆ ಮನೆಯಿಂದ ತಿರುಪತಿಗೆ ಬಂದಿದ್ದೇನೆ. ಅಲ್ಲಿ ಮದುವೆಯಾಗಿದ್ದೇನೆ. ಅಲ್ಲದೇ ಒಬ್ಬ 8 ವರ್ಷದ ಗಂಡು ಮಗುವಿದೆ ಎಂದು ಹೇಳಿದ್ದಾಳೆ. ತಕ್ಷಣ ಅವಳನ್ನು ತಿರುಪತಿಗೆ ಕರೆದುಕೊಂಡು ಬಂದಿದ್ದಾರೆ. ಅಲ್ಲದೇ ಅವರ ಸಂಬಂಧಿಸಿದವರ ಬಗ್ಗೆ ವಿಚಾರಿಸಿದರೂ ಪತ್ತೆಯಾಗಿಲ್ಲ, ಮತ್ತೆ ಅವಳ ಬಗ್ಗೆ ವಿಚಾರಿಸಿದಾಗ ನನ್ನ ತವರೂರು ಶಹಾಬಾದ ಎಂದು ಹೇಳಿದ್ದಾಳೆ ಹೊರತು ಎಲ್ಲಿ ಮನೆಯಿದೆ ಎಂದು ಹೇಳದಿರುವುದರಿಂದ ಶಹಾಬಾದ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದಿದ್ದಾರೆ. ಅಲ್ಲಿಯೂ ಸರಿಯಾದ ಮಾಹಿತಿ ತಿಳಿಯದಿರುವುದರಿಂದ ಲಿಂಗಾಯತ ಸಮಾಜದವರಾಗಿದ್ದರಿಂದ ವೀರಶೈವ ಸಮಾಜದ ಅಧ್ಯಕ್ಷ ಸೂರ್ಯಕಾಂತ ಕೋಬಾಳ ಅವರನ್ನು ಕರೆಯಿಸಿ ಇವರ ವಿವರವಾದ ಮಾಹಿತಿ ಕಲೆಹಾಕಿ ತವರು ಮನೆಯವರನ್ನು ಪತ್ತೆ ಹಚ್ಚಿ ಕುಟುಂಬಸ್ಥರಿಗೆ ಮನವೊಲಿಸಿ ಒಪ್ಪಿಸಿದ್ದಾರೆ.

ಈ ಸಂದರ್ಭದಲ್ಲಿ ಪೊಲೀಸ್ ಸಿಬ್ಬಂದಿಗಳಾದ ಹುಸೇನ ಪಾಷಾ, ಶಿವರಾಜ, ಪ್ರೇಮಲತಾ, ಶರಣಯ್ಯಸ್ವಾಮಿ (ಎಮ್.ಆರ್) ಇತರರು ಇದ್ದರು.

**KARNATAKA**
**News**

**KANNADA**

**SAMYUKTHA**
**Kalaburagi**

**DECEMBER 2021**

ಸುವರ್ಣ ಕರ್ನಾಟಕ ಪ್ರಶಸ್ತಿ ಪುರಸ್ಕೃತ samyuktha karnataka

# ಸಂಯುಕ್ತ ಕರ್ನಾಟಕ

ಕನ್ನಡಿಗರ ಸಾಕ್ಷಿಪ್ರಜ್ಞೆ

₹ 5-00

ಶತಕದತ್ತ ಓಟ... ತೊಂಭತ್ತರ ನೋಟ

ತಾಜಾ ಸುದ್ದಿಗಳಿಗಾಗಿ ನಮ್ಮ ಜಾಲತಾಣಗಳಿಗೆ ಭೇಟಿ ನೀಡಿ
www.epaper.samyukthakarnataka.com
Samyuktha Karnataka @samyuktakarnat2

ಕಲಬುರಗಿ Kalaburagi | ಹುಬ್ಬಳ್ಳಿ Hubballi | ಬೆಂಗಳೂರು Bengaluru | ಮಂಗಳೂರು Mangaluru | ದಾವಣಗೆರೆ Davanagere | ಬಾಗಲಕೋಟೆ Bagalakote | ಸಂಪುಟ Volume 23 | ಸಂಚಿಕೆ Issue 211 | ಪುಟ Pages 12 ಮಂಗಳವಾರ 14 ಡಿಸೆಂಬರ್ 2021

RNI REGN NO. KARKAN/1999/2674

### ಮುಂಬೈ ಖಾಸಗಿ ಸಂಸ್ಥೆಯ ಸಹಕಾರ ★ ಕೆಲ ವರ್ಷ ತಿರುಪತಿ....ಇನ್ನಷ್ಟು ವರ್ಷ ಮುಂಬೈನಲ್ಲಿ ವಾಸ

## ಹದಿನೈದು ವರ್ಷದಿಂದ ಕಾಣೆಯಾದ ಬಾಲಕಿ ಮಗುವಿನೊಂದಿಗೆ ವಾಪಸ್

ಸಂ.ಕ.ಸಮಾಚಾರ ಶಹಾಬಾದ: ನಗರದ ಹಳೆಯ ಶಹಾಬಾದನ ಶಿಬಿರಕಟ್ಟಾ ಬಡಾವಣೆಯ ಬಾಲಕಿಯೊಬ್ಬಳು 15 ವರ್ಷಗಳ ಹಿಂದೆ ಕಾಣೆಯಾಗಿ, ಈಗ ಮುಂಬೈ ಖಾಸಗಿ ಸಂಸ್ಥೆಯ ಸಹಕಾರದೊಂದಿಗೆ ಒಂದು ಮಗುವಿನೊಂದಿಗೆ ಮನೆಗೆ ವಾಪಸ್ ಆಗಿರುವ ಘಟನೆ ನಡೆದಿದೆ.

ಸಂಗೀತಾ ದಾನಪ್ಪಗೋಳ 15 ವರ್ಷಗಳ ಹಿಂದೆ 8ನೇ ತರಗತಿ ಓದುತ್ತಿದ್ದ ಸಂದರ್ಭದಲ್ಲಿ ಮಾನಸಿಕ ಅಸ್ವಸ್ಥಳಾಗಿದ್ದಾಗ ಕಾಣೆಯಾಗಿದ್ದಳು, ಪೋಷಕರು ಹುಡುಕಿ ಕೈಚೆಲ್ಲಿದ್ದರು. ಇಲ್ಲಿಂದ ಹೋಗಿದ್ದ ಬಾಲಕಿ ತಿರುಪತಿ ತಿಮ್ಮಪ್ಪನ ಸನ್ನಿಧಿಯಲ್ಲಿ, ಎಲ್ಲೆಲ್ಲೊ ಕೆಲಸ ಮಾಡಿಕೊಂಡಿದ್ದು. ಲಾರಿ ಚಾಲಕನೊಬ್ಬನನ್ನು ಮದುವೆಯಾಗಿದ್ದಳು. ಅವನಿಂದ ಒಂದು ಗಂಡು ಮಗುವನ್ನು ಪಡೆದಿದ್ದಾಳೆ, 2-3 ವರ್ಷ ಅವನೊಂದಿಗೆ ದಾಂಪತ್ಯ ಜೀವನ ಸಾಗಿಸಿದ್ದಳು. ಲಾರಿ ಚಾಲಕ ಅವಳನ್ನು ಬಿಟ್ಟು ಹೋಗಿದ್ದ, ನಂತರ ತನ್ನ ಮಗುವಿನೊಂದಿಗೆ ಮುಂಬೈಗೆ ಹೋಗಿದ್ದಳು ಅಲ್ಲಿ ರಸ್ತೆ ಪಕ್ಕದಲ್ಲಿಯೆ ಇದ್ದು, ಅಲ್ಲಲ್ಲಿ ಕೆಲಸ ಮಾಡಿ, ಮಗುವಿನೊಂದಿಗೆ ಜೀವನ ಸಾಗಿಸುತ್ತಿದ್ದಳು. ಇಷ್ಟು ದಿನದಿಂದ ದೂರವಿದ್ದ ಅವಳಿಗೆ ಕನ್ನಡ ಭಾಷೆ ಹೆಚ್ಚುಕಮ್ಮಿ ಮರೆತು ಹೋಗಿದ್ದು, ತೆಲುಗು ಮಾತನಾಡುತ್ತಿದ್ದಳು, ಅಲ್ಪಸ್ವಲ್ಪ ಕನ್ನಡ ಭಾಷೆ ನೆನಪಿನಲ್ಲಿದೆ.

ಮಗುವಿನೊಂದಿಗೆ ಅನಾಥವಾಗಿದ್ದ ಮಹಿಳೆ ಮುಂಬೈನ ಶ್ರದ್ಧಾ ರೇಗುಲೇಷನ್ ಫೌಂಡೇಷನ್ ಅವರ ಕಣ್ಣಿಗೆ ಬಿದ್ದಿದ್ದಾಳೆ, ಫೌಂಡೇಷನ್ ನಿರ್ದೇಶಕ, ಮಾನಸಿಕ ರೋಗ ತಜ್ಞ ಡಾ.ಭಾರತ ವಾಟವನಿ ಅವರು ತಮ್ಮ ವೃತ್ತಿಯಿಂದ ಬಂದ ಆದಾಯದ ಬಹುಭಾಗವನ್ನು ಈ ರೀತಿ ಮಾನಸಿಕ ಅಸ್ವಸ್ಥರ ಚಿಕಿತ್ಸೆಗೆ ಬಳಸುತ್ತಿದ್ದು, ಅವರು ಈ ಮಹಿಳೆಗೆ ತಮ್ಮ ಆಸ್ಪತ್ರೆಯಲ್ಲಿ ಮಾನಸಿಕ ಚಿಕಿತ್ಸೆ ನೀಡಿದ್ದಾರೆ. ಸ್ವಲ್ಪ ಸುಧಾರಿಸಿದ ನಂತರ ಅವರು ಮಹಿಳೆಯ ಮಾಹಿತಿ ಅನುಸರಿಸಿ ಫೌಂಡೇಷನ್



ಶಹಾಬಾದ ನಗರದ ಪೊಲೀಸ್ ಠಾಣೆಯಲ್ಲಿ 15 ವರ್ಷದಿಂದ ಕಾಣೆಯಾದ ಮಹಿಳೆ, ಮಗುವನ್ನು ಮುಂಬೈನ ಶ್ರದ್ಧಾ ರೇಗುಲೇಷನ್ ಫೌಂಡೇಷನ್‌ನ ಸಮಾಜ ಸೇವಕರು, ಪೋಲಿಸರ ಸಮ್ಮುಖದಲ್ಲಿ ಪೋಷಕರಿಗೆ ಒಪ್ಪಿಸಿದರು. ಸೂರ್ಯಕಾಂತ ಕೋಬಾಳ, ಸಂಗೀತಾ ದಾನಪ್ಪಗೋಳ, ಸುಲೋಚನಾ ಆರಿ, ಅದಿತಿ ಸೇಜಲ್ ಇತರರು ಇದ್ದರು.

- **ಯುವತಿಯನ್ನು ಅವರ ಸಹೋದರ ರವಿಕುಮಾರ ಅವರ ಸುಪರ್ದಿಗೆ ಒಪ್ಪಿಸಲಾಗಿದೆ.**

ಸಹಾಯಕ ನಿರ್ದೇಶಕಿ ಸುಲೋಚನಾ ಆರಿ, ಸಾಮಾಜಿಕ ಕಾರ್ಯಕರ್ತೆ ಅದಿತಿ ಸೇಜಲ್ ಅವರೊಂದಿಗೆ ತಾಯಿ ಮಗುವಿಗೆ ತಿರುಪತಿಗೆ ಕಳುಹಿಸಿದ್ದಾರೆ. ಅಲ್ಲಿ ಮಹಿಳೆ ಗಂಡನ ಬಗ್ಗೆ ಸೂಕ್ತ ಮಾಹಿತಿ, ಸಿಗದೆ ಇದ್ದು, ಈ ಮಹಿಳೆ ಬಾಲಕಿಯಾಗಿದ್ದಾಗ ಶಹಾಬಾದದಿಂದ ಬಂದಿದ್ದಾಳೆ ಎಂದು ತಿಳಿದು ಬಂದಿದ್ದರಿಂದ ಅವರನ್ನು ಶಹಾಬಾದ್ ಠಾಣೆಗೆ ಕರೆದುಕೊಂಡು ಬಂದಿದ್ದಾರೆ. ಇಲ್ಲಿ ಪೊಲೀಸರ ಸಹಾಯದಿಂದ, ಈ ಮಹಿಳೆ ವೀರಶೈವ ಲಿಂಗಾಯತ ಸಮಾಜಕ್ಕೆ ಸೇರಿದ್ದನ್ನು ಅರಿತು, ಸಮಾಜದ ಸ್ಥಳೀಯ ಅಧ್ಯಕ್ಷ ಸೂರ್ಯಕಾಂತ ಕೋಬಾಳ ಅವರನ್ನು ಸಂಪರ್ಕಿಸಿ, ಅವರ ಪೋಷಕರ ಪತ್ತೆ ಹಚ್ಚಿದ್ದಾರೆ.

ಮಹಿಳೆಯ ತಂದೆ ದಾನಪ್ಪ ಅವರ ಮೊದಲ ಪತ್ನಿಯ ಪುತ್ರಿಯಾಗಿದ್ದು, ಎರಡನೇ ಪತ್ನಿಗೆ ಇಬ್ಬರು ಮಕ್ಕಳು ಇದ್ದಾರೆ ಎನ್ನಲಾಗಿದೆ. ಯುವತಿಯನ್ನು ಅವರ ಸಹೋದರ ರವಿಕುಮಾರ ಅವರ ಸುಪರ್ದಿಗೆ ಒಪ್ಪಿಸಿದ್ದಾರೆ. ಮಾನಸಿಕ ಅಸ್ವಸ್ಥ ಮಹಿಳೆಗೆ ಶ್ರದ್ಧಾ ಸಂಸ್ಥೆ ಮುಂದಿನ 2 ವರ್ಷ ತಮ್ಮ ಖರ್ಚಿನಲ್ಲಿ ಮಾನಸಿಕ ಚಿಕಿತ್ಸೆ ನೀಡುವದಾಗಿ ಹೇಳಿ, 8-9 ವರ್ಷದ ಮಗನಿಗೆ ಶಾಲೆಗೆ ಸೇರಿಸಲು ನಿರ್ದೇಶನ ನೀಡಿದ್ದಾರೆ.

ಪೊಲೀಸರಾದ ಹುಸೇನ್ ಪಾಶಾ, ಶಿವರಾಜ, ಹೇಮಲತಾ, ಶರಣಯ್ಯ ಸ್ವಾಮಿ ಎಂ.ಆರ್. ಇದ್ದರು.

**KARNATAKA**
**News**

**KANNADA**

**E MEDIALINE**

**DECEMBER 2021**

e ಮೀಡಿಯಾ Line
NEWS & VIEWS

# ಶಹಾಬಾದ : ನಾಪತ್ತೆಯಾದ ಮಹಿಳೆಯೊಬ್ಬಳು ಪತ್ತೆ

ಮೂಲಕ **emedialine** - December 13, 2021



***ಶಹಾಬಾದ : ನಗರದಿಂದ ಹದಿನಾಲ್ಕು ವರ್ಷದ ಹಿಂದೆ ನಾಪತ್ತೆಯಾದ ಮಹಿಳೆಯನ್ನು ಪೊಲೀಸರು ಕುಟುಂಬಸ್ಥರಿಗೆ ಒಪ್ಪಿಸಿದರು.***

ಶಹಾಬಾದ: ನಗರದ ಹಳೆಶಹಾಬಾದನಲ್ಲಿ ೧೪ ವರ್ಷದ ಹಿಂದೆ ನಾಪತ್ತೆಯಾದ ಮಹಿಳೆಯೊಬ್ಬಳು ಪತ್ತೆಯಾಗಿ ಪೊಲೀಸರ, ವೀರಶೈವ ಸಮಾಜದ ಅಧ್ಯಕ್ಷ ಸೂರ್ಯಕಾಂತ ಕೋಬಾಳ ಹಾಗೂ ಮುಂಬಯಿನ ಶ್ರದ್ಧಾ ರೇಗುಲೇಷನ್ ಫೌಂಡೇಷನ್ ಸಿಬ್ಬಂದಿಗಳ ಸಮ್ಮುಖದಲ್ಲಿ ಮರಳಿ ಮನೆಗೆ ಸೇರಿದಂತ ಘಟನೆ ಸೋಮವಾರದಂದು ನಡೆದಿದೆ.

ಸುಮಾರು ೧೪ ವರ್ಷದ ಹಿಂದೆ ನಗರದ ಹಳೆಶಹಾಬಾದ ಸಂಗೀತಾ ದಾನಪ್ಪ ದಾನಪ್ಪಗೋಳ ನಾಪತ್ತೆಯಾಗಿದ್ದಳು.ಅಂದು ಪೊಲೀಸ್ ಠಾಣೆಗೆ ದೂರು ಸಲ್ಲಿಸಲಾಗಿತ್ತು.ಎಲ್ಲಾ ಕಡೆ ಹುಡುಕಲಾಗಿತ್ತು.ಆದರೂ ಪತ್ತೆಯಾಗಿರಲಿಲ್ಲ. ಮಾನಸಿಕ ಅಸ್ವಸ್ಥೆಯಾದ ಇವಳನ್ನು ಕಳೆದ ೮ ತಿಂಗಳ ಹಿಂದೆ ಮುಂಬಯಿಯಲ್ಲಿ ಅಲೆದಾಡುತ್ತಿರುವುದನ್ನು ಗಮನಿಸಿ, ಪೊಲೀಸರು ಶ್ರದ್ಧಾ ರೇಗುಲೇಷನ್ ಫೌಂಡೇಷನ್‌ಗೆ ಒಪ್ಪಿಸಿದರು.

ಶ್ರದ್ಧಾ ರೇಗುಲೇಷನ್ ಫೌಂಡೇಷನ್‌ಗೆ ಮುಖ್ಯಸ್ಥರಾದ ಡಾ.ಭರತ್ ವಟವಾಣಿ ಅವರು ಮಾನಸಿಕ ರೋಗಿ ತಜ್ಞರಾಗಿದ್ದು,ಅವಳನ್ನು ಚಿಕಿತ್ಸೆಗೆ ಒಳಪಡಿಸಿದ್ದಾರೆ.ಸುಮಾರು ಏಳೆಂಟು ತಿಂಗಳಿನಿಂದ ಉಪಚರಿಸಿ ಎಲ್ಲಿಂದ ಬಂದಿರುವೆ ಎಂದು ಕೇಳಿದ್ದಾರೆ. ಅವಳು ಹದಿನಾಲ್ಕು ವರ್ಷದ ಹಿಂದೆ ಮನೆಯಿಂದ ತಿರುಪತಿಗೆ ಬಂದಿದ್ದೆನೆ.ಅಲ್ಲಿ ಮದುವೆಯಾಗಿದ್ದೆನೆ.ಅಲ್ಲದೇ ಒಬ್ಬ ೮ ವರ್ಷದ ಗಂಡು ಮಗುವಿದೆ ಎಂದು ಹೇಳಿದ್ದಾಳೆ.

ತಕ್ಷಣವೇ ಅವಳನ್ನು ತಿರುಪತಿಗೆ ಕರೆದುಕೊಂಡು ಬಂದಿದ್ದಾರೆ.ಅಲ್ಲದೇ ಅವರ ಸಂಬಂಧಿಸಿದವರ ಬಗ್ಗೆ ವಿಚಾರಿಸಿದರೂ ಪತ್ತೆಯಾಗಿಲ್ಲ.ಮತ್ತೆ ಅವಳ ಬಗ್ಗೆ ವಿಚಾರಿಸಿದಾಗ ನನ್ನ ತವರೂರು ಶಹಾಬಾದ ಎಂದು ಹೇಳಿದ್ದಾಳೆ ಹೊರತು ಎಲ್ಲಿ ಮನೆಯಿದೆ ಎಂದು ಹೇಳದಿರುವುದರಿಂದ ಶಹಾಬಾದ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದಿದ್ದಾರೆ.ಅಲ್ಲಿಯೂ ಸರಿಯಾದ ಮಾಹಿತಿ ತಿಳಿಯದಿರುವುದರಿಂದ ಲಿಂಗಾಯತ ಸಮಾಜದವರಾಗಿದ್ದರಿಂದ ವೀರಶೈವ ಸಮಾಜದ ಅಧ್ಯಕ್ಷ ಸೂರ್ಯಕಾಂತ ಕೋಬಾಳ ಅವರನ್ನು ಕರೆಯಿಸಿ ಇವರ ವಿವರವಾದ ಮಾಹಿತಿಯನ್ನು ಕಲೆ ಹಾಕಿ ತವರು ಮನೆಯವರನ್ನು ಪತ್ತೆ ಹಚ್ಚಿ, ಕುಟುಂಬಸ್ಥರಿಗೆ ಮನವೊಲಿಸಿ ಒಪ್ಪಿಸಿದ್ದಾರೆ.

ಈ ಸಂದರ್ಭದಲ್ಲಿ, ಪೊಲೀಸ್ ಸಿಬ್ಬಂದಿಗಳಾದಹುಸೇನ ಪಾಷಾ, ಶಿವರಾಜ, ಪ್ರೇಮಲತಾ,ಶರಣಯ್ಯಸ್ವಾಮಿ (ಎಮ್.ಆರ್) ಇತರರು ಇದ್ದರು.